ಸಂಸ್ಥೆ	ಟೆಂಡರ್‌ನ ಮೊತ್ತ (ರೂ.ಲಕ್ಷಗಳಲ್ಲಿ)
1. ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ	3111.00
2. ಕರ್ನಾಟಕ ರಾಜ್ಯ ವಿದ್ಯುತ್ ಮಗ್ಗಗಳ ಅಭಿವೃದ್ಧಿ ನಿಗಮ ನಿಯಮಿತ	2334.00
ಒಟ್ಟು	5445.00

ಪಠ್ಯ ಪುಸ್ತಕ:– ಒಟ್ಟು 288 ಲಕ್ಷ ಉಚಿತ ಪಠ್ಯ ಪುಸ್ತಕಗಳಲ್ಲಿ ಸರ್ಕಾರಿ ಮುದ್ರಣಾಲಯಕ್ಕೆ 264 ಲಕ್ಷ ಹಾಗೂ ಉಳಿದ 124 ಲಕ್ಷ ಉಚಿತ ಪಠ್ಯಪುಸ್ತಕಗಳನ್ನು 15 ಖಾಸಗಿ ಮುದ್ರಕ/ಪ್ರಕಾಶಕರಿಗೆ ಟೆಂಡರ್ ಮೂಲಕ ನೀಡಿದೆ. ಖಾಸಗಿ ಪ್ರಕಾಶಕರಿಗೆ/ಮುದ್ರಕರಿಗೆ ನೀಡಿದ ಉಚಿತ ಪಠ್ಯ ಪುಸ್ತಕಗಳ ವಿತರಣೆಯ ಒಟ್ಟು ಟೆಂಡರ್ ಅಂದಾಜಿನ ವಿತರಣೆಯ ಒಟ್ಟು ಟೆಂಡರ್ ಅಂದಾಜಿನ ಮೊತ್ತ ರೂ.1309 ಲಕ್ಷಗಳು. ಮಾರಾಟಕ್ಕೆ ನಿಗದಿಪಡಿಸಿದ ಪಠ್ಯ ಪುಸ್ತಕಗಳ ಮುದ್ರಣ ಕಾರ್ಯವನ್ನು ಖಾಸಗಿ ಮುದ್ರಕರು/ಪ್ರಕಾಶಕರಿಗೆ ವಹಿಸಲಾಗಿದೆ.

3841 (3907) ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲಾ) ಶ್ರೀ ಇಕ್ಬಾಲ್ ಅನ್ಸಾರಿ (ವೈದ್ಯಕೀಯ ಶಿಕ್ಷಣ ಸಚಿವರು) ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವವರು.

ಅ. ರಾಜ್ಯದಲ್ಲಿರುವ ವೈದ್ಯಕೀಯ ಕಾಲೇಜುಗಳೆಷ್ಟು; (ಅಲೋಪಥಿಕ್, ಅಯುರ್ವೇದಿಕ್ ಯುನಾನಿ, ಹೋಮಿಯೋಪಥಿ ಇತ್ಯಾದಿ) ಇವುಗಳಲ್ಲಿ ಸರ್ಕಾರಿ ಮತ್ತು ಖಾಸಗಿ ಹಾಗೂ ಅನುದಾನಿತ, ಅನುದಾನರಹಿತವಾರು, ಕಾಲೇಜುಗಳೆಷ್ಟು ಜಿಲ್ಲಾವಾರು ವಿವರ ನೀಡುವುದು;

ಆ. ಹೊಸದಾಗಿ ವೈದ್ಯಕೀಯ ಕಾಲೇಜುಗಳನ್ನು ಸ್ಥಾಪಿಸಲು ಸರ್ಕಾರ ಮುಂದಾಗಿದೆಯೇ; ಹಾಗಿದ್ದಲ್ಲಿ ಎಲ್ಲೆಲ್ಲಿ ಸ್ಥಾಪಿಸಲಾಗಿದೆ, ಇವುಗಳಲ್ಲಿ ಸರ್ಕಾರಿ ಮತ್ತು ಖಾಸಗಿ ಕಾಲೇಜುಗಳು ಎಷ್ಟು;

ಇ. ಹಾಲಿ ಇರುವ ಕಾಲೇಜುಗಳು ಮುಚ್ಚುವ ಸ್ಥಿತಿಗೆ ಬಂದಿರುವುದು ನಿಜವೇ; ಹಾಗಿದ್ದಲ್ಲಿ ಅಂತಹ ಕಾಲೇಜುಗಳಾವುವು;

ಈ. ಮೈಸೂರಿನ ವೈದ್ಯಕೀಯ ಕಾಲೇಜು ಇಂತಹ ಸ್ಥಿತಿಗೆ ತಲುಪಿದೆಯೇ; ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು;

ಉ. ಇಂತಹ ಸ್ಥಿತಿಗೆ ತಲುಪಿರುವ ಈ ಕಾಲೇಜುಗಳ ಮೂಲಭೂತ ಸೌಲಭ್ಯ ಸಿಬ್ಬಂದಿ ಕೊರತೆಯನ್ನು ಸುಧಾರಿಸಲು ಸರ್ಕಾರಕ್ಕಿರುವ ತೊಂದರೆಗಳೇನು;

ಊ. ಈ ಕಾಲೇಜುಗಳ ಸುಧಾರಣೆ ಕೈಗೊಳ್ಳದೇ ಹೊಸ ವೈದ್ಯ ಕಾಲೇಜುಗಳನ್ನು ಸ್ಥಾಪನೆ ಮಾಡುವ ವಿಚಾರ ಹಾಸ್ಯಸ್ಪದವಲ್ಲವೇ?

ಶ್ರೀ ಇಕ್ಬಾಲ್ ಅನ್ಸಾರಿ (ವೈದ್ಯಕೀಯ ಶಿಕ್ಷಣ ಸಚಿವರು)

ಅ. **ಅಲೋಪಥಿಕ್**

ಸರ್ಕಾರಿ – 4

ಖಾಸಗಿ – 28

ಖಾಸಗಿ ಅನುದಾನಿತ – ಇಲ್ಲ

ಆಯುರ್ವೇದಿಕ್

ಸರ್ಕಾರಿ – 3

ಖಾಸಗಿ – 42

ಖಾಸಗಿ ಅನುದಾನಿತ – 5

ಯುನಾನಿ

ಸರ್ಕಾರಿ – 1

ಖಾಸಗಿ – 4

ಖಾಸಗಿ ಅನುದಾನಿತ – ಇಲ್ಲ

ಪ್ರಕೃತಿ ಚಿಕಿತ್ಸೆ

ಸರ್ಕಾರಿ – ಇಲ್ಲ

ಖಾಸಗಿ – 3

ಖಾಸಗಿ ಅನುದಾನಿತ – ಇಲ್ಲ

ಜಿಲ್ಲಾವಾರು ವಿವರ ಅನುಬಂಧದಲ್ಲಿ ನೀಡಿದೆ.

ಆ. ಹೌದು. ಬೀದರ್, ರಾಯಚೂರು, ಬೆಳಗಾಂ, ಹಾಸನ, ಮಂಡ್ಯ ಮತ್ತು ಶಿವಮೊಗ್ಗ. ಮೈಸೂರಿನ ಶಾಂತವೇರಿ ಗೋಪಾಲಗೌಡ ವೈದ್ಯಕೀಯ ಕಾಲೇಜಿಗೆ, ದಾವಣಗೆರೆಯ ಎಸ್.ಎಸ್.ವೈದ್ಯಕೀಯಕಾಲೇಜಿಗೆ ಮತ್ತು ಬೆಂಗಳೂರಿನ ದಯಾನಂದ ಸಾಗರ ವೈದ್ಯಕೀಯ ಕಾಲೇಜಿಗೆ ಕೇಂದ್ರ ಸರ್ಕಾರದ ಅನುಮತಿ ಪಡೆಯಲು ಅಗತ್ಯತಾ ಮತ್ತು ಕಾರ್ಯ ಸಾಧ್ಯತಾ ಪ್ರಮಾಣ ಪತ್ರಗಳನ್ನು ನೀಡಲಾಗಿದೆ.

ಇ. ಬೆಂಗಳೂರು ಎಮ್.ವಿ.ಜೆ ವೈದ್ಯಕೀಯ ಕಾಲೇಜಿಗೆ, ಡಾ॥ ಬಿ.ಆರ್.ಅಂಬೇಡ್ಕರ್ ವೈದ್ಯಕೀಯ ಕಾಲೇಜಿಗೆ ಮತ್ತು ಚಿತ್ರದುರ್ಗ ಬಸವೇಶ್ವರ ವೈದ್ಯಕೀಯ ಕಾಲೇಜಿಗೆ ವಿದ್ಯಾರ್ಥಿ ಪ್ರವೇಶ ಪಡೆಯಲು ಭಾರತ ಸರ್ಕಾರ ಅನುಮತಿಸಿಲ್ಲ.

ಈ. ಬೋಧನಾ ಸಿಬ್ಬಂದಿಯ ಕೊರತೆಯಿದ್ದು ಅವುಗಳನ್ನು ವಿಶೇಷ ನೇಮಕಾತಿ ಮೂಲಕ ನೇಮಕ ಮಾಡಲಾಗುತ್ತಿದೆ. ಹಾಗೂ ಕಾಲೇಜನ್ನು ಬಲವರ್ಧನೆಗೊಳಿಸಲಾಗುತ್ತಿದೆ.

ಉ. ಬೆಂಗಳೂರು ವೈದ್ಯಕೀಯ ಕಾಲೇಜನ್ನು ಮತ್ತು ಮೈಸೂರು ಮೆಡಿಕಲ್ ಕಾಲೇಜನ್ನು ಸ್ವಾಯತ್ತ ಸಂಸ್ಥೆಯಾಗಿ ಪರಿವರ್ತಿಸುವುದನ್ನು ಪರಿಶೀಲಿಸಲಾಗುತ್ತಿದೆ.

ಊ. ಅಸ್ತಿತ್ವದಲ್ಲಿರುವ ಸರ್ಕಾರಿ ವೈದ್ಯಕೀಯ ಕಾಲೇಜುಗಳನ್ನು ಬಲವರ್ಧನೆಗೊಳಿಸುವುದಲ್ಲದೇ ಮೆರಿಟ್ ಮತ್ತು ಮೀಸಲಾತಿ ಆಧಾರದ ಮೇಲೆ ಬಡ ವಿಧ್ಯಾರ್ಥಿಗಳಿಗೆ ವೈದ್ಯಕೀಯ ಶಿಕ್ಷಣ ನೀಡಲು ಅನುವಾಗುವಂತೆ ಹೊಸ ಸರ್ಕಾರಿ ವೈದ್ಯಕೀಯ ಕಾಲೇಜುಗಳನ್ನು ಸ್ಥಾಪಿಸಲಾಗುತ್ತಿದೆ.

ಜಿಲ್ಲಾವಾರು ವೈದ್ಯಕೀಯ ಕಾಲೇಜುಗಳ ಸಂಖ್ಯೆಯ ಪಟ್ಟಿ

ಕ್ರ ಸಂ	ಜಿಲ್ಲೆಯ ಹೆಸರು	ಕಾಲೇಜುಗಳ ಸಂಖ್ಯೆ
1	ಬೆಂಗಳೂರು	05
2	ಮೈಸೂರು	02
3	ಧಾರವಾಡ	02
4	ಬಳ್ಳಾರಿ	01
5	ತುಮಕೂರು	01
6	ಕೋಲಾರ	01
7	ಮಂಡ್ಯ	01
8	ದಾವಣಗೆರೆ	01
9	ಮಂಗಳೂರು	05
10	ಬೆಳಗಾಂ	01
11	ಬಾಗಲಕೋಟೆ	01
12	ಬಿಜಾಪುರ	02
13	ಗುಲ್ಬರ್ಗಾ	02
14	ರಾಯಚೂರು	01
15	ಚಿತ್ರದುರ್ಗ	01

*ಇದಲ್ಲದೆ ಬೆಂಗಳೂರಿನಲ್ಲಿ "05" ಸ್ವಾಯುತ್ತತಾ ಸಂಸ್ಥೆಗಳು ಸ್ನಾತಕೋತ್ತರ ಪದವಿ ಕೋರ್ಸುಗಳನ್ನು ಮಾತ್ರ ನಡೆಸುತ್ತಿವೆ.

ANNEXURE

List of Districtwise Ayurveda, Homoeopathy, Unani and Nature Cure & Yoga Colleges

Sl. No.	District	Ayurveda			Homoeopathy			Unani			Nature Cure & Yoga			Total
		Govt.	Pvt. Aid	Pvt	Govt.	Pvt. Aid	Pvt	Govt.	Pvt. Aid	Pvt	Govt.	Pvt. Aid	Pvt	
1	Bangalore	01	-	05	01	-	01	01	-	-	-	-	-	09
2	Tumkur	-	-	01	-	-	-	-	-	01	-	-	-	02
3	Shimoga	-	-	02	-	-	-	-	-	-	-	-	-	02
4	Chitradurga	-	-	02	-	-	-	-	-	-	-	-	-	02
5	Davanagere	-	-	01	-	-	-	-	-	-	-	-	-	01
6	Mysore	01	-	01	-	-	-	-	-	-	-	-	-	02
7	Hassan	-	-	01	-	-	-	-	-	-	-	-	-	01
8	Chickamagalore	-	-	01	-	-	-	-	-	-	-	-	-	01
9	Dakshina Kannada	-	-	02	-	-	01	-	-	-	-	-	01	04
10	Udupi	-	01	02	-	-	-	-	-	-	-	-	01	04
11	Belgaum	-	01	03	-	-	04	-	-	-	-	-	01	09
12	Dharwad	-	01	02	-	-	01	-	-	-	-	-	-	04
13	Gadag	-	01	03	-	-	-	-	-	-	-	-	-	04
14	Bijapur	-	01	02	-	-	01	-	-	01	-	-	-	05
15	Haveri	-	-	01	-	-	-	-	-	-	-	-	-	01
16	Bagalkote	-	-	06	-	-	-	-	-	-	-	-	-	06
17	Uttara Kannada	-	-	01	-	-	-	-	-	-	-	-	-	01
18	Gulbarga	-	-	02	-	-	01	-	-	01	-	-	-	04
19	Raichur	-	-	01	-	-	-	-	-	-	-	-	-	01
20	Koppal	-	-	01	-	-	-	-	-	-	-	-	-	01
21	Bidar	-	-	01	-	-	-	-	-	-	-	-	-	01
22	Bellary	01	-	01	-	-	-	-	-	-	-	-	-	02
Total		03	05	42	01	-	09	01	-	03	-	-	03	67